ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

**ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಮೌ.ತೆ.ವಿ-3, ಬೆಂಗಳೂರು ಇವರ ನಡಾವಳಿಗಳು**

ಸಂ.ಲೇ.ಸಾ/ಸ.ವಾ/ಸಿಆರ್.21/12-13 ದಿನಾಂಕ. 12-06-2014

**ಅಧಿಸೂಚನೆ**

**ವಿಷಯ: ಈ ಕಛೇರಿಯ ಕೆಎ 01 ಜಿ 3034 ಟಾಟಾ ಸುಮೋ ಹಳೆಯ ಒಂದು ವಾಹನವನ್ನು ಬಹಿರಂಗ ಹರಾಜು ಮಾಡುವ ಕುರಿತು.**

ಉಲ್ಲೇಖ:1. ಪ್ರಾ.ಸಾ.ಅ ಅವರ ಕಛೇರಿಯ ಶಿಫಾರಸ್ಸು ಪತ್ರದ ಸಂಖ್ಯೆ. ಇಲ್ಲ ದಿನಾಂಕ. 29-08-2013.
2. ಈ ಕಛೇರಿ ಸಮ ಸಂಖ್ಯೆ. ಪತ್ರದ ದಿನಾಂಕ. 21-9-2013.
3. ವಾ.ತೆ.ಆ ಪತ್ರದ ಸಂಖ್ಯೆ. ವಿಹೆಚ್‌ಟಿ/ಸಿಆರ್.07/2013-14 ದಿನಾಂ.22-10-2013.

********

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಮೌ.ತೆ.ವಿ-3, ಬೆಂಗಳೂರು ಇವರ ಕಛೇರಿಗೆ ಸಂಬಂಧಿಸಿದ ಹಳೆಯ ಒಂದು ಟಾಟಾ ಸುಮೋ ವಾಹನವನ್ನು ಯಾವ ಸ್ಥಿತಿಯಲ್ಲಿದೆಯೇ ಅದೇ ಸ್ಥಿತಿಯಲ್ಲಿ ವಿಲೇವಾರಿ ಮಾಡಲು ಉದ್ದೇಶಿಸಲಾಗಿದೆ. ಸದರಿ ವಾಹನವನ್ನು ದಿನಾಂಕ. 25-06-2014 ರಂದು ಬೆಳಿಗ್ಗೆ 10.30 ಗಂಟೆಗೆ ಈ ಕಛೇರಿಯ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ರವರ ಕೊಠಡಿಯಲ್ಲಿ ಸಾರ್ವಜನಿಕ ಸಮಕ್ಷಮ ಬಹಿರಂಗ ಹರಾಜು ಮಾಡಲು ನಿಗಧಿ ಪಡಿಸಲಾಗಿದೆ. ಆದ್ದರಿಂದ ಇಚ್ಚೆಯುಳ್ಳವರು ಸದರಿ ಹರಾಜಿನಲ್ಲಿ ಭಾಗವಹಿಸಿ ವಾಹನವನ್ನು ಖರೀದಿಬಹುದಾಗಿರುತ್ತದೆ.

**ಹರಾಜಿನ ವಾಹನಗಳ ವಿವರ**

| ಕ್ರ.ಸಂ | ವಾಹನ ಹೆಸರು | ವಾಹನದ ಸಂಖ್ಯೆ. | ಮಾಡೆಲ್ | ಚಾಸ್ಸಿ ಸಂಖ್ಯೆ. | ಇಂಜಿನ್ ಸಂಖ್ಯೆ. |
|---|---|---|---|---|---|
| 1 | ಟಾಟಾ ಸುಮೋ | **ಕೆಎ 01 ಜಿ 3034** | 1998 | 385003 ಕೆಎಸ್‌ಕ್ಯೂ 943350 | 483 ಡಿಎಲ್ 41 ಕೆಎಸ್ ಕ್ಯೂ 807610 |

ಈ ಮೇಲ್ಕಂಡ ವಾಹನವನ್ನು ಬಹಿರಂಗ ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ಈ ಕೆಳಗೆ ಸೂಚಿಸಿರುವ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟಿರಬೇಕಾಗಿರುತ್ತದೆ.

**ಬಹಿರಂಗ ಹರಾಜಿನ ಷರತ್ತು ಮತ್ತು ನಿಬಂಧನೆಗಳು**

1) ಪ್ರತಿಯೊಬ್ಬ ಬಿಡ್‌ದಾರರು ವಾಹನಗಳ ಹರಾಜಿನಲ್ಲಿ ಭಾವಹಿಸಲು, ಭದ್ರತಾ ಠೇವಣಿ ರೂ. 10000-00 (ರೂ ಹತ್ತು ಸಾವಿರ ರೂಪಾಯಿಗಳೂ) ಡಿ.ಡಿ ರೂಪದಲ್ಲಿ ಅಥವಾ ನಗದು ರೂಪದಲ್ಲಿ ಬಹಿರಂಗ ಹರಾಜು ನಡೆಯುವ ಸ್ಥಳದಲ್ಲಿ 10-30 ಗಂಟೆಯಿಂದ 12-00 ಗಂಟೆಯೊಳಗೆ ಪಾವತಿಸಿ ತಮ್ಮ ಹೆಸರುಗಳನ್ನು ನೋಂದಾಯಿಸಬೇಕು. 12-00 ಗಂಟೆಯ ನಂತರ ಬಂದ ಬಿಡ್‌ದಾರರ ಹೆಸರುಗಳನ್ನು ಬಹಿರಂಗ ಹರಾಜಿಗೆ ಪರಿಗಣಿಸುವುದಿಲ್ಲ. ಠೇವಣಿ ಹಣಕ್ಕೆ ಬಡ್ಡಿಯನ್ನು ಕೊಡಲಾಗುವುದಿಲ್ಲ.

2. ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಮೌ.ತೆ.ವಿ–3, ಬೆಂಗಳೂರು ಇವರು ನೇಮಿಸಲ್ಪಟ್ಟ ಅಧಿಕಾರಿಗಳಿಂದ ಬಹಿರಂಗ ಹರಾಜನ್ನು ನಡೆಸಲಾಗುವುದು ಠೇವಣಿ ಬಿಡ್‌ದಾರರು ಸವಾಲಿನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

3. ಬಹಿರಂಗ ಹರಾಜಿಗಿಟ್ಟಿರುವ ಮೇಲೆ ಹೇಳಿದ ವಾಹನಕ್ಕೆ ನಿಗದಿ ಪಡಿಸಿರುವ ಕನಿಷ್ಠ ಬೆಲೆ ರೂ.1,20,000–00 ಬಹಿರಂಗ ಹರಾಜಿನಲ್ಲಿ ಅತಿ ಹೆಚ್ಚಿನ ಬೆಲೆಯನ್ನು ದಾಖಲು ಮಾಡಿದ ಬಿಡ್‌ದಾರರನ್ನು ಯಶಸ್ವಿ ಖರೀದಿದಾರರೆಂದು ಪರಿಗಣಿಸಲಾಗುವುದು.

4. ಯಶಸ್ವಿಯಾದ ಬಿಡ್‌ದಾರರು ವಾಹನದ ಒಟ್ಟು ಬೆಲೆಯ ಶೇ. 50 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಬೇಕು ಉಳಿದ ಶೇ. 50 ರಷ್ಟು ಹಣವನ್ನು ನಂತರದ ಏಳು ದಿನಗಳೊಳಗಾಗಿ ಪಾವತಿಸುವುದು. ತಪ್ಪಿದಲ್ಲಿ ಮುಂಗಡವಾಗಿ ಕಟ್ಟಿದ ಶೇ. 50 ರಷ್ಟು ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೇ ವಾಹನವನ್ನು ಮರು ಹರಾಜಿನಲ್ಲಿ ಮಾರಾಟ ಮಾಡಲಾಗುವುದು.

5. ಹರಾಜು ಮಾಡಲಾದ ವಾಹನದ ಮೌಲ್ಯಕ್ಕೆ ಚಾಲ್ತಿಯಲ್ಲಿರುವ 'ವ್ಯಾಟ್ 'ತೆರಿಗೆಯನ್ನು ಪ್ರತ್ಯೇಕವಾಗಿ ಪಾವತಿ ಮಾಡಬೇಕು.

6. ಹರಾಜಿನಲ್ಲಿ ಭಾಗವಹಿಸಿದ ಬಿಡ್‌ದಾರರು ಹರಾಜು ಮುಗಿದ ನಂತರ ಹರಾಜಿನಲ್ಲಿ ಯಶಸ್ವಿಯಾದವರು ಮತ್ತು ಯಶಸ್ವಿಯಾಗದವರು ಸರ್ಕಾರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಯಶಸ್ವಿಯಾಗದ ಬಿಡ್‌ದಾರರಿಗೆ ಭದ್ರತಾ ಠೇವಣಿಯನ್ನು ಸ್ಥಳದಲ್ಲಿ ಹಿಂತಿರುಗಿಸಲಾಗುವುದು.

7. ಹರಾಜನ್ನು ಅಂಗೀಕರಿಸುವ ರದ್ದುಪಡಿಸುವ/ತಿರಸ್ಕರಿಸುವ ಅಧಿಕಾರವನ್ನು ಜಂಟಿ ಆಯುಕ್ತರು (ಆಡಳಿತ), ಮೌ.ತೆ.ವಿ–3, ಬೆಂಗಳೂರು ರವರು ಹೊಂದಿರುತ್ತಾರೆ. ಇವರ ತೀರ್ಮಾನವೇ ಅಂತಿಮವಾಗಿರುತ್ತದೆ.

8. ಮೇಲ್ಕಂಡ ಹರಾಜಿನ ಸಂಬಂಧದಲ್ಲಿ ಯಾವುದೇ ವಾದ–ವಿವಾದಗಳು ಉದ್ಭವಿಸಿದಲ್ಲಿ, ಜಂಟಿ ಆಯುಕ್ತರು (ಆಡಳಿತ), ಮೌ.ತೆ.ವಿ–3, ಬೆಂಗಳೂರು ಅವರು ನೀಡುವ ತೀರ್ಮಾನವೇ ಅಂತಿಮವಾಗಿರುತ್ತದೆ.

9. ಹರಾಜು ಮಾಡಲಿರುವ ಚಲಿಸುವ ಸ್ಥಿತಿಯಲ್ಲಿರುವ/ನಿರುಪಯುಕ್ತ ಹಳೆಯ ವಾಹನಗಳನ್ನು ಕಛೇರಿ ಆವರಣದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ. ಇಚ್ಛೆಯುಳ್ಳವರು ಕಛೇರಿ ವೇಳೆಯಲ್ಲಿ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಕೇ.ಕ) ಇವರನ್ನು ಸಂಪರ್ಕಿಸಿ ಪರಿಶೀಲನೆ ಮಾಡಿ, ಹರಾಜಿನಲ್ಲಿ ಭಾಗವಹಿಸುವುದು.

12/6/2014

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ)
ಮೌಲ್ಯವರ್ಧಿತ ತೆರಿಗೆ–3, ಬೆಂಗಳೂರು

ಪ್ರತಿಗಳು:

1. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ) ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಮಾನ್ಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು (ಕೇಂದ್ರ), ಕೋರಮಂಗಲ ಬೆಂಗಳೂರು ಇವರು ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
3. ವಾಣಿಜ್ಯ ತೆರಿಗೆ ಉಪ ಆಯುಕ್ತರು, ಇ–ಆಡಳಿತ ವಾಣಿಜ್ಯ ತೆರಿಗೆ ಆಯುಕ್ತರ ಕಛೇರಿ, ಬೆಂಗಳೂರುರವರಿಗೆ ಇಲಾಖೆಯ ಅಂತರ್ಜಾಲ ತಾಣ ctax.kar.nic.in ಮತ್ತು E-Notice Board ಎರಡರಲ್ಲಿಯೂ ಪ್ರಕಟಿಸಲು ಕೋರಿದೆ.
4. ಸೂಚನಾ ಫಲಕಕ್ಕೆ.
5. ಕಛೇರಿ ಪ್ರತಿ.